# ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಪುತ್ತೂರು ಉಪವಿಭಾಗ , ಪುತ್ತೂರು

ASSISTANT COMMISSIONER REVENUE SUB-DIVISION PUTTUR D.K.

ಪ್ರಕರಣದ ಸಂಖ್ಯೆ:ಎಡಿಸ್ ಆರ್ ಆರ್ ಟಿ.ಎಸ್ ಆರ್:.45/2013-14

ದಿನಾಂಕ : 25-10-2016.

ಉಪಸ್ಥಿತರು : ಡಾ| ರಾಜೇಂದ್ರ ಕೆ.ವಿ. ಐ.ಎ.ಎಸ್.

ಉಪವಿಭಾಗಾಧಿಕಾರಿ

ಪುತ್ತೂರು ಉಪವಿಭಾಗ ಪುತ್ತೂರು

---

| ಮೇಲ್ಮನವಿದಾರರು | ಪ್ರತಿವಾದಿಯವರು |
|---|---|
| ಶಾಂತಿರಾಜ ಗುಡಿಗಾರ | 1) ನಾರಾಯಣ ಗುಡಿಗಾರ |
| ಬಿನ್ ದಾಸಪ್ಪ ಗುಡಿಗಾರ | 2) ಕೃಷ್ಣಪ್ಪ ಗುಡಿಗಾರ |
| ಸವಣಾಲು ಗ್ರಾಮ, | 3) ಸರಸ್ವತಿ |
| ಬೆಳ್ತಂಗಡಿ ತಾಲೂಕು | 4) ಹರಿಣಾಕ್ಷಿ |
| | 5) ತಹಶೀಲ್ದಾರರು, ಬೆಳ್ತಂಗಡಿ ತಾಲೂಕು. |

ಪ್ರಸ್ತಾವನೆ :

ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 136 ರನ್ವಯ ಬೆಳ್ತಂಗಡಿ ತಾಲೂಕು ಸವಣಾಲು ಗ್ರಾಮದ ಸ.ನಂಬ್ರ 19/3,19/10ಎಪಿ1, 19/11ಪಿ1, 19/4 ಸ್ಥಳಗಳ ಪಹಣಿ ಪತ್ರಿಕೆಯಲ್ಲಿ ಎದುರುದಾರರ ಹೆಸರು ದಾಖಲಿಸಿರುವುದನ್ನು ಪ್ರಶ್ನಿಸಿ ಈ ಮೇಲ್ಮನವಿಯನ್ನು ಸಲ್ಲಿಸಿರುವುದಾಗಿದೆ.

ಮೇಲ್ಮನವಿದಾರರು ಬೆಳ್ತಂಗಡಿ ತಾಲೂಕು ಸವಣಾಲು ಗ್ರಾಮದ ನಿವಾಸಿಗಳಾಗಿರುತ್ತಾರೆ. ಇವರು ಅಳಿಯ ಸಂತಾನ ಪದ್ಧತಿಯಂತೆ ಆಚರಣೆ ನಡೆಸಿಕೊಂಡು ಬರುವ ಕುಟುಂಬವಾಗಿದೆ. ಸವಣಾಲು ಗ್ರಾಮದ ಸ.ನಂಬ್ರ 19/3, 0-32 ಎಕ್ರೆ, 19/4, 1-14 ಎಕ್ರೆ 19/10ಎಪಿ1, 5-46 ಎಕ್ರೆ, 19-11ಪಿ1 , 0-62 ಎಕ್ರೆ ಮತ್ತು 19/13, 0-18 ಎಕ್ರೆ ಜಮೀನುಗಳು 5-2-11945 ರಂದು ಇತರ ಭೂಮಿಗಳೊಂದಿಗೆ ನೋಂದಾಯಿತ ದಸ್ತಾವೇಜಿನ ಮೂಲಕ ಅದಲು-ಬದಲು ಮಾಡಿಕೊಂಡು ಮೇಲ್ಮನವಿದಾರರ ಕುಟುಂ ಬಕ್ಕೆ ಬಂದ ಭೂಮಿಯಾಗಿದೆ. ಈ ಸ್ಥಳಗಳ ಪಹಣಿ ಪತ್ರಿಕೆಯಲ್ಲಿ ಎದುರುದಾರರ ಹೆಸರನ್ನು ಮಾತ್ರ ನೋಂದಾಯಿಸಿರುವುದನ್ನು ಕಳಚುವಂತೆ ಕೋರಿರುತ್ತಾರೆ.

ಸದ್ರಿ ಮೇಲ್ಮನವಿಯನ್ನು ಪರೀಶೀಲಿಸಿ ವಿಚಾರಣೆಗೆ ಒಪ್ಪಿ ಮೇಲ್ಮನವಿದಾರರಿಗೆ ಮತ್ತು ಪ್ರತಿವಾದಿಯವರಿಗೆ ವಿಚಾರಣೆಗೆ ದಿನಾಂಕ:6-8-2013ರಂದು ಹಾಜರಾಗುವಂತೆ ನೋಟೀಸು ನೀಡಿ ಪ್ರಕರಣವನ್ನು ಸಕಾರಣಗಳಿಗಾಗಿ ಮುಂದೂಡಲಾಗಿ ಅಂತಿಮವಾಗಿ ದಿನಾಂಕ 7-6-2016 ರಂದು ವಿಚಾರಣೆ ಕೈಗೆತ್ತಿಕೊಂಡು ಆದೇಶಕ್ಕೆ ಕಾಯ್ದಿರಿಸಲಾಯಿತು.

ಸದ್ರಿ ಪ್ರಕರಣದ ವಿಚಾರಣೆ ಸಮಯ ಪ್ರತಿವಾದಿಯವರ ಪರ ನ್ಯಾಯವಾದಿಯವರು ಹಾಜರಾಗಿರುತ್ತಾರೆ. ಪ್ರತಿವಾದಿಗಳಾದ 2ರಿಂದ 4ನೇ ಯವರ ಪರವಾಗಿ ನ್ಯಾಯವಾದಿ ಲಿಖಿತ ಆಕ್ಷೇಪಣೆ ಸಲ್ಲಿಸಿರುತ್ತಾರೆ. ಸದ್ರಿ ಆಕ್ಷೇಪಣೆಯಲ್ಲಿ ಈ ಜಮೀನುಗಳು ದಿನಾಂಕ: 5-2-1945 ರ ಬದಲಾವಣೆ ಪತ್ರದಂತೆ ಬಂದಿರುತ್ತವೆ. ಈ ಮೇಲ್ಮನವಿಯನ್ನು ಯಾವುದೇ ಮ್ಯುಟೇಷನ್ ಆದೇಶ ಪ್ರಶ್ನಿಸಿ ಸಲ್ಲಿಸಿರುವುದಿಲ್ಲ. ವಿಳಂಬ ವಿನಾಯತಿಗೆ ಅರ್ಜಿ ಸಲ್ಲಿಸಿರುವುದಿಲ್ಲ. ಹಾಗೂ ನಿಗದಿತ ಅವಧಿಯೊಳಗೆ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. ಅಲ್ಲದೆ ಕುಟುಂಬದ ಸಂತತಿ ವಿವರಗಳು ಅಪೂರ್ಣವಾಗಿದೆ. ಇದೊಂದು ಸುಳ್ಳು ಮೇಲ್ಮನವಿಯಾಗಿದ್ದು, ಇದು ತಿರಸ್ಕರಿಸಲು ಯೋಗ್ಯವೆಂದು ತಿಳಿಸಿರುತ್ತಾರೆ.

ಮೇಲ್ಮನವಿದಾರರು ತಮ್ಮ ಲಿಖಿತ ವಾದದಲ್ಲಿ ಪ್ರಸ್ತುತ ಕುಟುಂಬದ ಎಲ್ಲಾ ಸದಸ್ಯರು ಸೇರಿ, ಬೆಳ್ತಂಗಡಿ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ಮೂಲದಾವೆ 17/2015 ರಂತೆ ದಾಖಲಿಸಿರುತ್ತಾರೆ, ಈ ದಾವೆ ಇತ್ಯರ್ಥವಾಗುವವರೆಗೆ ಪಹಣಿ ಪತ್ರಿಕೆಯಲ್ಲಿ ಹೊಸದಾಗಿ ನೋಂದಣಿಯಾಗಿರುವ ಎದುರುದಾರರ ಹೆಸರು ಕಳಚಿ ಹಿಂದೆ ಇದ್ದಂತಹವರ ಹಳೆಯ ಹೆಸರನ್ನು ನೋಂದಾಯಿಸುವಂತೆ ಆದೇಶಿಸಲು ಕೋರಿರುತ್ತಾರೆ.

ಮೇಲ್ಮನವಿಯ ಎಲ್ಲಾ ಅಂಶಗಳನ್ನು ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ ಮೇಲ್ಮನವಿದಾರರು ಯಾವುದೇ ನಿರ್ಧಿಷ್ಟ ಮ್ಯುಟೇಷನ್ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿರುವುದು ಕಂಡು ಬರುವುದಿಲ್ಲ. ಮೇಲ್ಮನವಿಯಲ್ಲಿ ದಾವಾ ಜಮೀನಿನ ಹಕ್ಕಿನ ನಿರ್ಧಾರ ಕುರಿತು ಕೇಳಿಕೊಂಡಿರುತ್ತಾರೆ. ಜಮೀನಿನ ಹಕ್ಕಿನ ಬಗ್ಗೆ ಈಗಾಗಲೇ ಬೆಳ್ತಂಗಡಿ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ O.S. 17/2015 ರಂತೆ ದಾವೆ ದಾಖಲಿಸಿರುವುದು ಇನ್ನೂ ಇತ್ಯರ್ಥಕ್ಕೆ ಬಾಕಿ ಇರುವುದು ಕಂಡು ಬರುತ್ತದೆ. ಹಕ್ಕಿನ ಕುರಿತು ನಿರ್ಧರಿಸಲು ಕಂದಾಯ ನ್ಯಾಯಾಲಯಕ್ಕೆ ಅಧಿಕಾರ ವ್ಯಾಪ್ತಿ ಇರುವುದಿಲ್ಲವಾದ ಕಾರಣ ಈ ಕೆಳಗಿನಂತೆ ಆದೇಶಿಸಿದೆ.

## ಆದೇಶ

ಮೇಲ್ಮನವಿಯನ್ನು ತಿರಸ್ಕರಿಸಿದೆ.

ಈ ಆದೇಶವನ್ನು ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿ, , ಪರಿಷ್ಕರಿಸಿ ಈ ದಿನ ದಿನಾಂಕ: 25-10-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.

ASSISTANT COMMISSIONER REVENUE SUB-DIVISION PUTUR, D.K.

Rajendra

(ಡಾ| ರಾಜೇಂದ್ರ ಕೆ.ವಿ. ಐ.ಎ.ಎಸ್.)

ಸಹಾಯಕ ಆಯುಕ್ತರು

ಪುತ್ತೂರು ಉಪವಿಭಾಗ, ಪುತ್ತೂರು ದ.ಕ.

ಪ್ರತಿ : ಮೇಲ್ಮನವಿದಾರರರಿಗೆ ನ್ಯಾಯವಾದಿ ಶ್ರೀ. ನೇಮಿರಾಜ ಶೆಟ್ಟಿ ಇವರ ಮೂಲಕ ಜ್ಯಾರಿಗೆ

ಪ್ರತಿ:ಪ್ರತಿವಾದಿಯವರಿಗೆ ನ್ಯಾಯವಾದಿ ಶ್ರೀ ಪ್ರಸಾದ್ ಕೆ.ಎಸ್. ಇವರ ಮುಖಾಂತರ ಜ್ಯಾರಿಗೆ

ಪ್ರತಿ : ತಹಶೀಲ್ದಾರರು , ಬೆಳ್ತಂಗಡಿ ತಾಲೂಕು ಇವರಿಗೆ - ಸೂಕ್ತ ಕ್ರಮಕ್ಕಾಗಿ